ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯ, ದಾವಣಗೆರೆ

ಸಿಸಿ ನಂ. 142/2023

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಸುಜಾತಾ | PW–1 |
| ತಂದೆ:ಗಂಡನ ಹೆಸರು | – | ರವಿಕುಮಾರ | CW–1 |
| ವಯಸ್ಸು | – | 39 ವರ್ಷ | |
| ಉದ್ಯೋಗ | – | ಗೃಹಿಣಿ | |
| ವಾಸ ಸ್ಥಳ | – | ಕಿತ್ತೂರು ಗ್ರಾಮ | |

ದಿನಾಂಕಃ 20–07–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ–

ಚಾಸಾ–4 ನನ್ನ ಅಣ್ಣ. ಚಾಸಾ–5 ನನ್ನ ತಮ್ಮ. ಚಾಸಾ–6 ನನ್ನ ತಂದೆ. ಚಾಸಾ–7 ರಿಂದ 10 ಪರಿಚಯ ಇದೆ, ಎಲ್ಲಾ ಆರೋಪಿತರ ಪರಿಚಯ ಇದೆ. ಸುಮಾರು 3 ವರುಷದ ಹಿಂದೆ ಬೆಳಿಗ್ಗೆ 8.30 ರ ಸುಮಾರಿಗೆ ಕಿತ್ತೂರು ಗ್ರಾಮದ ನಮ್ಮ ಮನೆ ಬಳಿ ಇದ್ದೆನು. ಆಗ ಎಲ್ಲಾ ಆರೋಪಿತರು ನಮ್ಮ ಮನೆ ಹತ್ತಿರ ಬಂದು 1 ಮತ್ತು 5 ನೇ ಆರೋಪಿತರು ನಮ್ಮ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ನಿನ್ನ ಅಣ್ಣನನ್ನು ಕರಿಯೇ ಬೋಸುಡಿ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ಮತ್ತು 2 ನೇ ಆರೋಪಿತರು ನನ್ನ ಸೀರೆ ಹಿಡಿದು ಎಳೆದಾಡಿದರು. ಆಗ ಚಾಸಾ–4 ಸ್ಥಳಕ್ಕೆ ಬಂದು ಜಗಳ ಬಿಡಿಸಲು ಬಂದರು ಆಗ 3 ನೇ ಆರೊಪಿ ಒಂದು ರಾಡಿನಿಂದ ಚಾಸಾ–4 ರವರ ತಲೆಗೆ ಹಲ್ಲೆ ಮಾಡಿರುತ್ತಾನೆ. ಎಲ್ಲಾ ಆರೋಪಿತರು ಕೂಡಿ ಕೈಕಾಲುಗಳಿಂದ ಚಾಸಾ–4 ರವರಿಗೆ ಹಲ್ಲೆ ಮಾಡಿದರು. ಸದರಿ ಜಗಳ ಕೇಳಿ ಸ್ಥಳಕ್ಕೆ ಬಂದ ಚಾಸಾ–5 ನನ್ನ ತಮ್ಮನಿಗೆ ಭುಜಕ್ಕೆ 3 ನೇ ಆರೋಪಿ ಕಣೆಗೆಯಿಂದ ಹೊಡೆದಿರುತ್ತಾನೆ. ನಂತರ 1 ನೇ ಆರೋಪಿ ಒಂದು ಬ್ಲೇಡ್ ನಿಂದ ನನ್ನ ಎಡಗೈಗೆ ಎಳೆದಿರುತ್ತಾನೆ ಇದರಿಂದ ನನ್ನ ಎಡಗೈಗೆ ರಕ್ತ ಗಾಯವಾಗಿರುತ್ತದೆ.

ಅಷ್ಟರಲ್ಲಿ ನನ್ನ ತಂದೆ ಚಾಸಾ–6 ರವರು ಸ್ಥಳಕ್ಕೆ ಬಂದರು. 7 ನೆ ಆರೋಪಿ ನನ್ನ ತಂದೆ ಚಾಸಾ–6 ರವರಿಗೆ ಕಣೆಗೆಯಿಂದ ತಲೆಗೆ ಹಲ್ಲೆ ಮಾಡಿರುತ್ತಾನೆ. ಇದರಿಂದ ನನ್ನ ತಂದೆ ಚಾಸಾ–6 ರವರಿಗೆ ಪ್ರಜ್ಞೆ ತಪ್ಪಿರುತ್ತದೆ. 9 ರಿಂದ 14 ಮತ್ತು 16 ನೇ ಆರೋಪಿತರು ನನಗೆ ಕೈಕಾಲುಗಳಿಂದ ಹೊಡೆದಿರುತ್ತಾರೆ. ನಂತರ ಜಗಳ ಕೇಳಿ ಚಾಸಾ–7 ರಿಂದ 10 ರವರು ಬಂದು ಜಗಳ ಬಿಡಿಸಿ ಕಳಿಸಿರುತ್ತಾರೆ. ನಂತರ ಸ್ಥಳಕ್ಕೆ ಅಂಬುಲೆನ್ಸ ಕರೆಸಿಕೊಂಡು ನನ್ನನ್ನು ಮತ್ತು ಚಾಸಾ–4 ರಿಂದ 6 ರವರನ್ನು ಸಿ ಜಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ನನ್ನ ತಂದೆ ಚಾಸಾ–7 ರವರನ್ನು ಹುಬ್ಬಳ್ಳಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಲಾಯಿತು. ನಂತರಗ್ರಾಮಸ್ಥರು ತಿರ್ಮಾನ ಮಾಡುವುದಾಗಿ ಹೇಳಿದರು. ಅದಕ್ಕಾಗಿ 2 ದಿನ ಕಳೆದೆವು ಆದರೆ ಯಾವುದೇ ತೀರ್ಮಾನವಾಗದ ಕಾರಣ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿದಾರರು ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು. ನ್ಯಾಯಾಧೀಶರ ಮುಂದೆ ನೀಡಿದ ಕಲಂ 164 ಸಿ ಆರ ಪಿ ಸಿ ಅಡಿಯಲ್ಲಿ ಹೇಳಿಕೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು ಸಾಕ್ಷಿಯ ಸಹಿಯನ್ನು ನಿಪಿ–2 ಎ ಎಂದು ಗುರುತಿಸಲಾಯಿತು. ಆರೋಪಿತರು ಕೃತ್ಯ ಕ್ಕೆ ಬಳಸಿದ ಬ್ಲೇಡನ್ನು ಗುರುತಿಸಿದ್ದು ಅದನ್ನು ಮುಮಾ–1 ಎಂದು, ಒಂದು ಕಬ್ಬಿಣದ ಸರಳನ್ನು ಮುಮಾ–2 ಎಂದು, 2 ಕಣೆಗೆಗಳನ್ನು ಮುಮಾ–3 ಮತ್ತು 4 ಎಂದು, ಎರಡು ಹಿಡಿಗಾತ್ರದ ಕಲ್ಲುಗಳನ್ನು ಮುಮಾ–5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸದರಿ ದಿನ ಅವಾಚ್ಯ ಶಬ್ದದಿಂದ ಬೈದು ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹೋಗಬೇಕಾದರೆ ನನ್ನನ್ನು ಮತ್ತು ಚಾಸಾ-4 ರಿಂದ 6 ರವರನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ- ಆರೋಪಿತರ ಪರ ವಕೀಲರಿಂದಃ

ನಾನು 7 ನೇ ತರಗತಿವರೆಗೆ ಓದಿರುತ್ತೇನೆ ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ-1 ನ್ನು ಠಾಣೆಯ ಮುಂಭಾಗ ಇದ್ದ ಒಬ್ಬ ವಿದ್ಯಾವಂತರ ಕಡೆಯಿಂದ ಬರೆಸಿರುತ್ತೇನೆ. ಸದರಿಯವರ ಹೆಸರು ಹಾಲಿ ನೆನಪಿಲ್ಲ. ಆರೋಪಿತರು ನನ್ನ ಹಾಗೂ ಇತರೆ 13 ಜನರ ವಿರುದ್ಧ ದಾವಣಗೆರೆ ಗ್ರಾಮಾಂತರ ಠಾಣೆಯಲ್ಲಿ ಒಂದು ದೂರು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಪೊಲೀಸರು ಅಂತಿಮ ವರದಿ ಸಲ್ಲಿಸಿ ಅದು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ನಾವು ಹಾಗೂ ಆರೋಪಿತರು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಒಂದು ಕಣದ ವಿಚಾರಕ್ಕೆ ಸಂಬಂದಪಟ್ಟಂತೆ ನಮ್ಮ ತಂದೆಹಾಗೂ 1 ಮತ್ತು 2 ನೇ ಆರೋಪಿತರ ನಡುವೆ ದಾವಣಗೆರೆ ನ್ಯಾಯಾಲಯದಲ್ಲಿ ಒಂದು ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ. ಸದರಿ ಕಣದ ವಿಚಾರಕ್ಕೆ ಸಂಬಂದಪಟ್ಟಂತ ನಮ್ಮ ಹಾಗೂ 1 ನೇ ಆರೋಪಿತರ ನಡುವೆ ಆಗಾಗ್ಗೆ ಗಲಾಟೆಯಾಗುತ್ತಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸುವ 2 ದಿನ ಪೂರ್ವದಲ್ಲಿ ಹೆಣ್ಣು ಮಕ್ಕಳ ನಡುವೆ ಗಲಾಟೆಯಾಗಿತ್ತು ಎಂದರೆ ಸರಿ. ನಾನು ದೂರು ದಾಖಲು ಮಾಡಿದ ನಂತರ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಕಲಂ 164 ಅಡಿಯಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ. ಆ ಸಮಯದಲ್ಲಿ ನನ್ನ ತಮ್ಮ ನನ್ನ ಜೊತೆ ಇದ್ದರು.

ನನ್ನ ದೂರಿನಲ್ಲಿ 16 ನೇ ಆರೋಪಿ ನನ್ನ ಕತ್ತಿನಲ್ಲಿದ್ದ ಚೈನನ್ನು ಕಿತ್ತು ಹಾಕಿದ್ದು ಬಂಗಾರದ ಗುಂಡುಗಳು ಕಳೆದು ಹೋಗಿ ತಾಳಿ ಮಾತ್ರ ಸಿಕ್ಕಿದೆ ಎಂದು ಹೇಳಿ ಬರೆಸಿರುವುದಿಲ್ಲ. ನಮ್ಮ ಮನೆ ಜನಸಂದಣಿ ಇರುವಂತಹ ಸ್ಥಳ ಎಂದರೆ ಸರಿ. ಆರೋಪಿತರು ನಮ್ಮ ಮನೆಗ ಬಂದು ಗಲಾಟೆ ಮಾಡಿದಾಗ ಚಾಸಾ-4 ರಿಂದ 6 ರವರು ಮನೆಯಲ್ಲೇ ಇದ್ದರು. ರಾಡಿನಿಂದ ಮಾಡಿದ ಹಲ್ಲೆಯಿಂದ ನನ್ನ ಮೈ ಕೈ ಎಲ್ಲಾ ರಕ್ತ ಆಗಿತ್ತು. ನಮ್ಮ ತಂದೆಗೆ ಹಲ್ಲೆಯಿಂದ ರಕ್ತ ಬಂದಿರಲಿಲ್ಲ. ರಕ್ತವಾಗಿದ್ದಂತಹ ನನ್ನ ಬಟ್ಟೆಯನ್ನು ನಾನು ಪೊಲೀಸರಿಗೆ ನೀಡಿಲ್ಲ. ಮುಮಾ-1 ರಿಂದ 6 ನ್ನು ಪೊಲೀಸರು ನಮ್ಮ ಮನೆಯ ಮುಂಭಾಗದಿಂದ ತೆಗೆದುಕೊಂಡಿರುತ್ತಾರೆ. ಗಲಾಟೆ ಶಬ್ದ ಕೇಳಿ ನಮ್ಮ ಗ್ರಾಮದ 10-15 ಜನ ಸ್ಥಳಕ್ಕೆ ಬಂದಿದ್ದರು. ಆರೋಪಿತರನ್ನು ಮತ್ತು ಜಗಳ ಬಿಡಿಸಲು ಬಂದವರನ್ನು ಮತ್ತು ನಮ್ಮನ್ನು ಎಲ್ಲರನ್ನೂ ಕೂಡಿ ಒಟ್ಟು ಸುಮಾರು 50 ಜನ ಸ್ಥಳದಲ್ಲಿ ಇದ್ದೆವು. ಜಗಳ ನಡದ ಸಮಯದಲ್ಲಿ ನಾನು ಸಹ ಸ್ಥಳದಲ್ಲಿಯೇ ಇದ್ದೆನು ಮನೆಯ ಹೊರಭಾಗದಲ್ಲಿ ಇದ್ದು ಜಗಳ ಬಿಡಿಸಿದೆನು. ಮುಮಾ-3 ಮತ್ತು 4 ತರಹದ ಕಣೆಗೆಗಳು ಸಾಮಾನ್ಯವಾಗಿ ನಮ್ಮ ಗ್ರಾಮದಲ್ಲಿ ಸಿಗುತ್ತದೆ ಎಂದರೆ ಸರಿ. ಮುಮಾ-1 ನ್ನು ಆರೋಪಿತರು ಗಲಾಟಯಾದ ನಂತರ ನಮ್ಮ ಮನೆಯ ಮುಂಭಾಗದಲ್ಲಿ ಬಿಸಾಡಿ ಹೋಗಿದ್ದರು. ಅದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮುಮಾ-5 ಮತ್ತು 6 ನ್ನು ಆರೋಪಿತರು ಗಲಾಟೆ ನಂತರ ಮನೆ ಹತ್ತಿರ ಬಿಸಾಡಿದ್ದರು ಅದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಾನು ಗಲಾಟೆ ನಡೆದ 3 ದಿನಗಳ ನಂತರ ದೂರು ದಾಖಲು ಮಾಡಿದ್ದೇನೆ ಎಂದರೆ ಸರಿ. ಗಲಾಟೆ ನಡೆದ ಕೂಡಲೇ ನಾವು ವೈದ್ಯರಿಗೆ ಬೇಟಿ ಮಾಡಿ ಚಿಕಿತ್ಸ ಪಡೆದು ನಮ್ಮ ತಂದೆಯನ್ನು ಹುಬ್ಬಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೊಗಿದ್ದೆವು.

ಗಲಾಟೆ ನಡೆದ ದಿನವೇ ನಾವು ಠಾಣಗೆ ಹೋಗಿ ದೂರು ನೀಡಿರುತ್ತೇವೆ. ಊರಿನವರು ಪಂಚಾಯಿತಿ ಮಾಡುತ್ತೇವೆ ಎಂದು ಹೇಳಿದ ಕಾರಣ ಸದರಿ ದೂರನ್ನು ನಾನು ನೀಡಿರುವುದಿಲ್ಲ. ಆರೋಪಿತರು ಸದರಿ ದಿನ ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ, ಹಲ್ಲೆ ಮಾಡಿಲ್ಲ, ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೊಪಿ ಬ್ಲೇಡಿನಿಂದ ಹಲ್ಲೆ ಮಾಡಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ನಡುವಿನ ದ್ವೇಷದಿಂದ ಆರೋಪಿತರ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ನೀಡಿದ ದೂರಿಗೆ ಪ್ರತಿದೂರಾಗಿ ನಿಪಿ-1 ದೂರನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ